ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಶೈಶಾ/ಕಾ.ಬದ./2021-22 ದಿನಾಂಕ:15-09-2021

**ಸುತ್ತೋಲೆ**

ವಿಷಯ: 2021-22ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ಕಾಲೇಜು ಬದಲಾವಣೆಗೆ ದಿನಾಂಕ ವಿಸ್ತರಿಸುವ ಬಗ್ಗೆ.

ಉಲ್ಲೇಖ:-1.ಈ ಕಚೇರಿಯ ಸುತ್ತೋಲೆ ಸಂಖ್ಯೆ: ಪಪೂಶಿಇ/ಶೈ.ಶಾ./ಕಾ.ಬದ/ 2021-22 ದಿನಾಂಕ:27.07.2021.

2. ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ: ಪಪೂಶಿಇ/ಶೈಶಾ/ಪ್ರ.ಪಿ.ದಾ/2021-22 ದಿನಾಂಕ:- 31.08.2021

------

2021-22 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿಗೆ ದಾಖಲಾತಿಯನ್ನು ದಿನಾಂಕ: 01.09.2021 ರಿಂದ 05.10.2021 ರವರೆಗೆ ಮತ್ತು ದ್ವಿತೀಯ ಪಿಯುಸಿಯನ್ನು ದಿನಾಂಕ:30.08.2021 ರಿಂದ 05.10.2021 ರವರೆಗೆ ವಿಸ್ತರಿಸಿ ಉಲ್ಲೇಖ 02 ರ ಸುತ್ತೋಲೆ ಪತ್ರದನ್ವಯ ಆದೇಶಿಸಲಾಗಿದೆ.

ಮುಂದುವರೆದು, ಕಾಲೇಜು ಬದಲಾವಣೆಗೆ ಉಲ್ಲೇಖ 01ರ ಆದೇಶದಲ್ಲಿ ದಿನಾಂಕ:-09.09.2021 ರವರೆಗೆ ನೀಡಲಾಗಿತ್ತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ, ದ್ವಿತೀಯ ಪಿಯುಸಿ ತರಗತಿಗಳಿಗೆ ಕಾಲೇಜು ಬದಲಾವಣೆಗೆ ದಂಡ ಶುಲ್ಕದೊಂದಿಗೆ ದಿನಾಂಕ:-13/09/2021 ರಿಂದ 25/09/2021 ರವರೆಗೆ ಹಾಗೂ ವಿಶೇಷ ದಂಡ ಶುಲ್ಕಗಳೊಂದಿಗೆ ದಿನಾಂಕ:- 27/09/2021 ರಿಂದ 05/10/2021 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಎಲ್ಲಾ ಪ್ರಾಂಶುಪಾಲರು ಕಾಲೇಜಿನ ಸೂಚನಾ ಫಲಕದಲ್ಲಿ ಸದರಿ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸುವುದು ಹಾಗೂ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ಸೂಕ್ತ ವಿಧಾನದಿಂದ ತಿಳಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:-

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ- ಮುಂದಿನ ಕ್ರಮಕ್ಕಾಗಿ
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು, ಜಿಲ್ಲಾ ಉಪನಿರ್ದೇಶಕರ ಮೂಲಕ -ಮುಂದಿನ ಕ್ರಮಕ್ಕಾಗಿ
3. ಜಂಟಿ ನಿರ್ದೇಶಕರು (ಪರೀಕ್ಷೆ/ಆಡಳಿತ/ಶೈಕ್ಷಣಿಕ/ಮಾನ್ಯತೆ/RIDF),ಪದವಿ ಪೂರ್ವ ಶಿಕ್ಷಣ ಇಲಾಖೆ - ಮಾಹಿತಿಗಾಗಿ
4. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ-ಮಾಹಿತಿಗಾಗಿ
5. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ- ವೆಬ್‌ಸೈಟ್‌ನಲ್ಲಿ ಅಳವಡಿಸಲು ಮತ್ತು 32 ಶೈಕ್ಷಣಿಕ ಜಿಲ್ಲೆಗಳ ಉಪ ನಿರ್ದೇಶಕರಿಗೆ ಈ-ಮೇಲ್ ಮಾಡಲು ಅಗತ್ಯ ಕ್ರಮಕ್ಕಾಗಿ.
6. ಕಛೇರಿ ಪ್ರತಿ.